# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1137
ಸದಸ್ಯರ ಹೆಸರು : ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20.12.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

*********

| | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಗೆ ಮಂಜೂರಾದ ವಿವಿಧ ಉಷ್ಣ ವಿದ್ಯುತ್ ಸ್ಥಾವರಗಳು ಯಾವುವು; ಈ ಸ್ಥಾವರಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನ ಪ್ರಮಾಣ ಎಷ್ಟು; (ಸಂಸ್ಥೆವಾರು ವಿಳಾಸದೊಂದಿಗೆ ಮಾಹಿತಿ ನೀಡುವುದು) | ಉಡುಪಿ ಜಿಲ್ಲೆಯ ಎಲ್ಲೂರು ಗ್ರಾಮದಲ್ಲಿ ಮೆ : ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರ ಶಾಖೋತ್ಪನ್ನ ವಿದ್ಯುತ್ ಸ್ಥಾವರವು ಕಾರ್ಯನಿರ್ವಹಿಸುತ್ತಿದ್ದು ಇದರ ಸ್ಥಾಪಿತ ಸಾಮರ್ಥ್ಯವು 1200 ಮೆ.ವ್ಯಾ.ಗಳಾಗಿರುತ್ತದೆ. 2018-19ನೇ ಸಾಲಿನ ಅಕ್ಟೋಬರ್-18ರ ಅಂತ್ಯಕ್ಕೆ ಒಟ್ಟು 2925.14 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಈ ಸ್ಥಾವರದಿಂದ ರಾಜ್ಯಕ್ಕೆ ಲಭ್ಯವಾಗಿರುತ್ತದೆ. |
| ಆ) | "ಉಡುಪಿ ಜಿಲ್ಲೆಯ ಉಡುಪಿ ಪವರ್ ಕಾರ್ಪೊರೇಶನ್ ಲಿಮಿಟೆಡ್" ಯಾವ ಹಂತದಲ್ಲಿ ಕಾರ್ಯನಿರ್ವಹಿಸುತ್ತಿದೆ ; ಈ ಸ್ಥಾವರವು ಉತ್ಪಾದನೆ ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ; ಈ ಸ್ಥಾವರಗಳಿಗೆ ಸರ್ಕಾರವು ನೀಡಿರುವ ಭೂಮಿಯ ವಿಸ್ತೀರ್ಣ ಎಷ್ಟು ; ಕಂಪೆನಿಯು ರೈತರಿಂದ ಖರೀದಿಸಿರುವ ಭೂಮಿಯ ಪ್ರಮಾಣ ಎಷ್ಟು ; | ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಶಾಖೋತ್ಪನ್ನ ವಿದ್ಯುತ್ ಸ್ಥಾವರವು 2012 ರಲ್ಲಿ ವಾಣಿಜ್ಯ ಕಾರ್ಯಾರಂಭ ದಿನಾಂಕ (ಸಿ.ಓ.ಡಿ.) ಆದಾಗಿನಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆ.<br>2018-19ನೇ ಸಾಲಿನ ಅಕ್ಟೋಬರ್-18ರ ಅಂತ್ಯಕ್ಕೆ ಒಟ್ಟು 2925.14 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಈ ಸ್ಥಾವರದಿಂದ ರಾಜ್ಯಕ್ಕೆ ಲಭ್ಯವಾಗಿರುತ್ತದೆ.<br>ಸದರಿ ಸಂಸ್ಥೆಯು ಈ ಸ್ಥಾವರ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ 647.624 ಎಕರೆ ಭೂಮಿಯನ್ನು ಖರೀದಿಸಿರುತ್ತದೆ. ಕಂಪನಿಯು ರೈತರಿಂದ ನೇರವಾಗಿ ಭೂಮಿಯನ್ನು ಖರೀದಿಸಿರುವುದಿಲ್ಲ. |
| ಇ) | ಉಡುಪಿ ಸ್ವರ್ಣಾ ನದಿಗೆ ಬಜ್ಪೆಯಲ್ಲಿ ನಿರ್ಮಿಸಲಾಗಿರುವ ಜಲ ವಿದ್ಯುತ್ ಉತ್ಪಾದನಾ ಘಟಕದ ಸಲುವಾಗಿ ನಿರ್ಮಿಸಲಾದ ಡ್ಯಾಂನ ಎತ್ತರ ಎಷ್ಟು ; ಈ ಡ್ಯಾಂ ಉಡುಪಿ ನಗರಸಭೆಯಿಂದ ಕುಡಿಯುವ ನೀರಿನ ಪೂರೈಕೆಗಾಗಿ ನಿರ್ಮಿಸಲಾಗಿರುವ ಡ್ಯಾಂಗಿಂತ 3 ಅಡಿ ಎತ್ತರದಲ್ಲಿರುವುದು ನಿಜವೇ ; ಈ ಡ್ಯಾಂನಿಂದಾಗಿ ರೈತರ ಭೂಮಿ ಮುಳುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎತ್ತರವನ್ನು ತಗ್ಗಿಸಲು ಸರ್ಕಾರದ ಕ್ರಮವೇನು ? | ಉಡುಪಿ ಜಿಲ್ಲೆಯ ಹಿರಿಯಡ್ಕ ಗ್ರಾಮದ ಬಳಿ ಸ್ವರ್ಣ ನದಿಗೆ ಅಡ್ಡಲಾಗಿ ಮೆ: ದೇವರ್ ಪವರ್ ಲಿಮಿಟೆಡ್ ರವರು 3.8 ಮೆ.ವ್ಯಾ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಗೊಳಿಸಿದ್ದು, ಸದರಿ ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವ ಸಂಪೂರ್ಣ ಯೋಜನಾ ವರದಿಯಲ್ಲಿ (DPR) ಡ್ಯಾಂ ಅನ್ನು ನಗರಸಭೆ, ಉಡುಪಿರವರು ಹಾಲಿ ಕುಡಿಯುವ ನೀರಿನ ಯೋಜನೆಗೆ ನಿರ್ಮಿಸಿರುವ ಡ್ಯಾಂಗಿಂತ 1 ಮೀ ಎತ್ತರಕ್ಕೆ ನಿರ್ಮಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಯೋಜನೆಯನ್ನು ಪ್ರಾರಂಭಿಸುವ ಮೊದಲು ಅಭಿವೃದ್ಧಿದಾರರು ನಗರಸಭೆ, ಉಡುಪಿ, ಜಲಸಂಪನ್ಮೂಲ ಇಲಾಖೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ/ಅನುಮೋದನೆ ಪತ್ರಗಳನ್ನು ಪಡೆದಿರುತ್ತಾರೆ. ಪ್ರಸ್ತುತ ಸಾರ್ವಜನಿಕರಿಂದ ಜಿಲ್ಲಾಧಿಕಾರಿಗಳು ಉಡುಪಿ ರವರಿಗೆ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ರವರು ದೂರನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. |

ಸಂಖ್ಯೆ: ಇಎನ್ 248 ಇಬಿಎಸ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ